ಅ.ದಾ. ನಂ.472/2014

ಡಿ.ಡಬ್ಲ್ಯೂ-2

ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕಃ 14-02-2020

**ಪಾಟೀ ಸವಾಲುಃ**- ಶ್ರೀ ಸಿ.ವಿ.ಪಿ ವಕೀಲರಿಂದ

ನಾನು ಕ್ರಯಕ್ಕೆ ಪಡೆದ ಸ್ವತ್ತಿನ ದಾಖಲೆಗಳಲ್ಲಿ ಪೂರ್ವಕ್ಕೆ ನವೀನ್ ರವರ ಸ್ವತ್ತು ಎಂಬುದರ ಬದಲಾಗಿ ಜವರೇಗೌಡ ಎಂಬುವವರ ಸ್ವತ್ತು ಎಂದು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಸ್ವತ್ತಿನ ಪೂರ್ವಕ್ಕೆ ಇರುವ ಜವರೇಗೌಡರ ಸ್ವತ್ತು ನವೀನರವರಿಗೆ ಕ್ರಯವಾಗಿ ಬಂದ ಸ್ವತ್ತಾಗಿದೆ ಎಂದು ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರದಲ್ಲಿ ಬರೆಸಿದ್ದೇನೋ ಇಲ್ಲವೋ ನನಗೆ ಗೊತ್ತಿಲ್ಲ . ನವೀನ ಮತ್ತು ಜವರೇಗೌಡ ರಾಜಿ ಸಂದಾನ ಮಾಡಿಕೊಂಡಿದ್ದಾರೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ತಿಳಿಸಿದ್ದು, ಅವರು ಯಾವಾಗ ರಾಜಿ ಮಾಡಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ನವೀನ ಮತ್ತು ಜವರೇಗೌಡರವರ ನಡುವೆ ಇದ್ದ ವಿವಾದ ನನಗೆ ಗೊತ್ತಿಲ್ಲ. ಅವರಿಬ್ಬರು ಏನೆಂದು ರಾಜಿ ಮಾಡಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ನವೀನ ಮತ್ತು ಜವರೇಗೌಡರವರು ರಾಜಿ ಮಾಡಿಕೊಂಡಿರುವ ವಿಚಾರವಾಗಿ ಯಾವ ದಾಖಲೆಗಳನ್ನು ಮಾಡಿಕೊಂಡಿದ್ದಾರೆ ನನಗೆ ಗೊತ್ತಿಲ್ಲ. ನವೀನ ಮತ್ತು ಜವರೇಗೌಡ ರಾಜಿ ಮಾಡಿಕೊಂಡಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿಲ್ಲ.

ನಾನು ಕ್ರಯಕ್ಕೆ ಪಡೆದ ಸ್ವತ್ತಿನ ಪೂರ್ವಕ್ಕೆ ನವೀನರವರ ಸ್ವತ್ತು ಇದೆ ಜವರೇಗೌಡರವರ ಸ್ವತ್ತು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಜವರೇಗೌಡರಿಗೆ ಸ್ವತ್ತು ಹೇಗೆ ಬಂತು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಕ್ರಯಕ್ಕೆ ಪಡೆದಿರುವ ಸ್ವತ್ತಿನ ಉತ್ತರಕ್ಕೆ ಹೇಮಲತ ಇದ್ದಾರೆ. ನಿಪಿ-15 ನ್ನು ಹೇಮಲತರವರಿಗೆ ಸಿ.ವಿ ಮಂಜಪ್ಪ ಬರೆದುಕೊಟ್ಟಿರುವ ಕ್ರಯಪತ್ರ ಎಂದರೆ ಸರಿ . ನಿಪಿ-15 ರಲ್ಲಿ ನಮೂದಾಗಿರುವ ಸ್ವತ್ತಿನ ಚೆಕ್ಕುಬಂದಿಯಲ್ಲಿ ಪೂರ್ವಕ್ಕೆ ನವೀನರವರ ನಿವೇಶನ ಎಂದು ನಮೂದಾಗಿದೆ ಎಂದರೆ ಸರಿ. ನನ್ನ ಸ್ವತ್ತು ಮತ್ತು ಹೇಮಲತರವರ ಸ್ವತ್ತು ನವೀನರವರ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಇದೆ ಎಂದರೆ ನನಗೆ ಗೊತ್ತಿಲ್ಲ. ಮಂಜಪ್ಪರವರ ಸ್ವತ್ತಿನ ಪೂರ್ವಕ್ಕೆ ಸತ್ಯನಾರಾಯಣರವರ ಸ್ವತ್ತು ಇದೆ ಎಂದರೆ ನನಗೆ

ಗೊತ್ತಿಲ್ಲ. ಸತ್ಯನಾರಾಯಣರವರ ಸ್ವತ್ತಿನ ಪೂರ್ವಕ್ಕೆ ನರಸಪ್ಪರವರ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಸತ್ಯನಾರಾಯಣರವರಿಂದ ನವೀನ್ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನವೀನ್ ರವರ ಕ್ರಯಪತ್ರವನ್ನು ನಾನು ನೋಡಿಲ್ಲ.

ನವೀನ್ ಕ್ರಯಪತ್ರದಲ್ಲಿ ಪಶ್ಚಿಮಕ್ಕೆ ಸಿ.ವಿ. ಮಂಜಪ್ಪರವರ ಸ್ವತ್ತು ಎಂದು ನಮೂದಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು 12 ವರ್ಷಗಳಿಂದ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿರುವ ಕಲ್ನಾರು ಶೀಟಿನ ಮನೆಯನ್ನು ವಾದಿ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾಗ ಅ.ದಾ. 154/2009 ದಾಖಲಿಸಿದ್ದು, ಅದು ಡಿಕ್ರಿಯಾಗಿ ವಾದಿ ಮನೆಯಲ್ಲಿ ಇಲ್ಲದ ಸಮಯದಲ್ಲಿ ದಾವಾ ಸ್ವತ್ತಿಗೆ ಹೋಗಿ ನಾನು ಸೇರಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ವಿಚಾರವಾಗಿ ವಾದಿಯು ನನ್ನ ವಿರುದ್ಧ ಠಾಣೆಗೆ ದೂರು ನೀಡಿದ್ದು, ಪೋಲೀಸರು ದಾವೆ ಡಿಕ್ರಿಯಾಗಿದೆ ಎಂದು ಆಕೆಯ ದೂರನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಅಂದಿನಿಂದ ನಾನು ದಾವಾ ಸ್ವತ್ತಿನ ಅಕ್ರಮ ಸ್ವಾಧೀನದಲ್ಲಿದ್ದೇನೆ ಎಂದರೆ ಸರಿಯಲ್ಲ. ನನ್ನ ಕಟ್ಟಡ ಪರವಾನಿಗೆಯಲ್ಲಿ ನನ್ನ ಸ್ವತ್ತಿನ ಪೂರ್ವಕ್ಕೆ ನವೀನ್ ರವರ ಸ್ವತ್ತು ಇದ್ದರೂ ಜವರೇಗೌಡರವರ ಸ್ವತ್ತು ಇದೆ ಎಂದು ಸುಳ್ಳು ಚೆಕ್ಕುಬಂದಿ ನಮೂದು ಮಾಡಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ಅ.ದಾ. 154/2009 ರಲ್ಲಿ ನನ್ನ ಸ್ವತ್ತಿಗೆ ಸಂಬಂಧಪಟ್ಟಂತೆ ದಾವಾ ದಾಖಲಿಸಿದ್ದು, ಅದು ಡಿಕ್ರಿಯಾಗಿದೆ ಎಂದರೆ ಸರಿ. ಪ್ರಸ್ತುತ ದಾವೆಯ ದಾವಾ ಸ್ವತ್ತು ಮತ್ತು ಅ.ದಾ. 154/2009 ರಲ್ಲಿರುವ ಸ್ವತ್ತುಗಳು ಬೇರೆ ಬೇರೆ ಎಂದರೆ ಸರಿಯಲ್ಲ. ಒ.ಎಸ್. 154/2009 ರ ತೀರ್ಪು ಪ್ರಸ್ತುತ ದಾವೆಯ ದಾವಾ ಸ್ವತ್ತಿಗೆ ಸಂಬಂಧಪಟ್ಟದ್ದಲ್ಲ ಎಂದರೆ ಸರಿಯಲ್ಲ. ನಾನು ಕ್ರಯಪತ್ರ ಬರೆಸಿಕೊಳ್ಳುವಾಗ ಸುಳ್ಳು ಚೆಕ್ಕುಬಂಧಿಯನ್ನು ನಮೂದು ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಹಿಂದಿನಿಂದಲೂ ಇಲ್ಲಿಯವರೆಗೂ ಗುರಿಗಾರನಹಳ್ಳಿಯಲ್ಲಿ ವಾಸವಿದ್ದು, ದಾವಾ ಸ್ವತ್ತಿನಲ್ಲಿ ವಾಸವಿಲ್ಲ ಎಂದರೆ ಸರಿಯಲ್ಲ. ಮಂಜಪ್ಪರವರಿಗೆ ಇದ್ದ ಒಟ್ಟು 40X120 ಅಡಿಗಳಲ್ಲಿ 40X60 ಅಡಿಗಳನ್ನು ನನಗೆ ಮಾರಾಟ ಮಾಡಿದ್ದಾರೆ. ಹೇಮಲತ ಯಾರಿಂದ ಕ್ರಯಕ್ಕೆ ಪಡೆದಿದ್ದಾರೆ ನನಗೆ ಗೊತ್ತಿಲ್ಲ ಮಂಜಪ್ಪ ಉಳಿದ 40X60 ಅಡಿಗಳನ್ನು

ಹೇಮಲತರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ನೆನಪಿಲ್ಲ.

ನನ್ನ ಸ್ವತ್ತನ್ನು ನಾನು ನಿರ್ಧಿಷ್ಟವಾಗಿ ಗುರುತಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ವಾದಿಯ ಸ್ವತ್ತನ್ನು ನನ್ನ ಸ್ವತ್ತು ಎಂದು ಅಕ್ರಮವಾಗಿ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.,

ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ